60

ನಿರಪರಾಧಿ

(ರಾಜಾಜಿಯವರ ಕಥೆ)

ಮೂಲ ಲೇಖಕರು:
ಶ್ರೀ। ಚಕ್ರವರ್ತಿ ರಾಜಗೋಪಾಲಾಚಾರಿ.

ಅನುವಾದಕರು:
ಶ್ರೀ। ಎಲ್. ಎಸ್. ನಾಯಕ.

1955.



ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟರಾಯ (ವಿನೋದ ಕಥೆ)
೨. *ನಾಗೇಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ
ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತತ್ಯಾಗ ಮತ್ತು ಇತರ ಕಥೆಗಳು
೬. ಚುನಾವಣೆ ಅರ್ಥಾತ್ ಬನಾವಣೆ
(ಏಕಾಂಕ ಪ್ರಹಸನ)
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು'
(ವಿನೋದ ಕಥೆಗಳು)
೮. *ಇಂಗ್ಲಿಷ್–ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. *ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ.
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. ತಿರುಕ್ಕುರಲ್
೨೩. ಸೂರ್ಯನ ಸಂಸಾರ
ಮತ್ತು ಇತರ ಕಥೆಗಳು.
೨೪. *ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು.
೨೬. *ಮಾರಾವತಾರ
(ಏಕಪಾತ್ರ ಯಕ್ಷಗಾನ ಪ್ರಬಂಧ)
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಬಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧. ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಅಳುವಿನ ಹೊಳೆ ಮತ್ತು
ಕೇಶವಭೂಪ (ಮಕ್ಕಳ ಕಥೆಗಳು)
೩೫. ಶರಾಬಿನ ಶಿಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ [ಕಥೆಗಳು
೪೦. ಆಭರಣಗಳ ಪೆಟ್ಟಿಗೆ, ಮತ್ತು ಇತರ
೪೧. ಭಾರತದ ಮಂತ್ರಿಮಂಡಲಗಳು (ದ್ವಿ.
೪೨. ಕಾಲುಬಳೆಯ ಕಥೆ [ಮುದ್ರಣ
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ
ಮತ್ತು ಇತರ ಕಥೆಗಳು
೪೫. ಸಂಭಾಷಿತ
೪೬. ೧೮೫೭ರ "ಸಿಪಾಯಿ ದಂಗೆ" ಅಥವಾ
ಬ್ರಿಟಿಷರಿಗೆದುರಾಗಿ ಭಾರತೀಯರ
ಸ್ವಾತಂತ್ರ್ಯಸಮ:
೪೭. ಅಕಾಂಡ ತಾಂಡವ (ರೇಡಿಯೋ ನಾಟಕ
೪೮. ಸಾಹಸದ ಕಥೆಗಳು.
೪೯. ಸಂಜ್ಞಾ ಜ್ಞಾನ ಕೋಶ
೫೦. ಪಂಡಿತನ ಪಿಟೀಲು
೫೧. ಭೋಗಯಾತ್ರೆ
೫೨. ಸಂಗ್ರಾಮಸಿಂಹ
೫೩. ಧರ್ಮ ಶಿಕ್ಷಾ
೫೪. ಮಹಾತ್ಮ
೫೫. ಮೀರಾಬಾಯಿ (ಏಕಾಂಕ ನಾಟಕ)
೫೬. ವೀರರಮಣಿ ಕರ್ಮದೇವಿ
೫೭. ಅರಳಿದ ನಗು
೫೮. ಸಚಿತ್ರ ಜಪಾನ್
೫೯. ಚುಟ್ಟ ಬಿಟ್ಟ ಧಿಟ್ಟ (ಏಕಾಂಕ ಪ್ರಹಸ
೬೦. ನಿರಪರಾಧಿ

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಅರ್ವತ್ತು ಪುಸ್ತಕಗಳಲ್ಲಿ, ಅರ್ವತ್ತು ಆಣೆಗಳಿಗೆ,
'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, 1312 ಪುಟಗಳನ್ನು ಕೊಟ್ಟಿರುತ್ತದೆ.

ಶ್ರೀ। ಚಕ್ರವರ್ತಿ ರಾಜಗೋಪಾಲಾಚಾರಿಯವರು

ಎರಡು ಬಾರಿ ಮದರಾಸು ರಾಜ್ಯದ ಮುಖ್ಯಮಂತ್ರಿಗಳಾಗಿಯೂ, 1948ರಲ್ಲಿ ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲರಾಗಿಯೂ ಸೇವೆ ಸಲಿಸಿ, ಈಗ ಅಧಿಕಾರದಿಂದ ನಿವೃತ್ತರಾಗಿ, ತಮ್ಮ ಇಳಿವಯಸ್ಸಿನಲ್ಲೂ ಜನತಾಸೇವೆ ಮಾಡುತ್ತಿರುವ ಶ್ರೀ। ಚಕ್ರವರ್ತಿ ರಾಜಗೋಪಾಲಾಚಾರಿಯವರು, ಭಾರತದ ಎಲ್ಲ ರಾಜ್ಯಗಳಲ್ಲಿಯೂ ಪ್ರೀತಿಸಲ್ಪಡುವ, ಗೌರವಿಸಲ್ಪಡುವ ಅಸಾಧಾರಣ ಮೇಧಾವಿಗಳಾಗಿರುವರು, ಅವರನ್ನು ರಾಜಾಜಿಯೆಂದು ವಾಡಿಕೆಯಾಗಿ ಕರೆವರು.

ರಾಜಾಜಿಯವರಿಗೆ 76 ವಯಸ್ಸು. ಅವರು 1879ರಲ್ಲಿ ಸೇಲಂ ಜಿಲ್ಲೆಯಲ್ಲಿ, ವೈಷ್ಣವ ಬ್ರಾಹ್ಮಣ ದಂಪತಿಗಳಲ್ಲಿ ಜನಿಸಿದರು. ಬಾಲ್ಯದಿಂದಲೂ ಚುರುಕುಬುದ್ಧಿಯುವರಾಗಿದ್ದರು. ತರ್ಕದಲ್ಲಿ ಅವರು ಮೇಲ್ಮಟ್ಟದ ತಾರ್ಕಿಕರಾಗಿದ್ದರು. ವಕೀಲವೃತ್ತಿಯ ಕಡೆಗೆ ಅವರ ಮನಸ್ಸು ಒಲಿದು, ಶಿಕ್ಷಣ ಮುಗಿಸಿ, ಸೇಲಮಿನಲ್ಲಿ ವಕೀಲವೃತ್ತಿಯನ್ನಾರಂಭಿಸಿದರು. ಮುಂದೆ, ಮದರಾಸಿಗೆ ಬಂದು, ಅಲ್ಲಿ ತಮ್ಮ ವೃತ್ತಿಗೆ ತೊಡಗಿದರು.

1916ರಲ್ಲಿ ಭಾರತದಲ್ಲಿ "ಹೋಮ್ ರೂಲ್'' ಚಳವಳವು ಆರಂಭವಾದಾಗ, ರಾಜಾಜಿಯವರು ಪ್ರಥಮತಃ ರಾಜಕೀಯಗಳಲ್ಲಿ ಪ್ರವೇಶಿಸಿದರೆನ್ನಬಹುದು. ಮುಂದೆ ಕೆಲಕಾಲಾನಂತರ ರಾಜಾಜಿಯವರು ಮಹಾತ್ಮಾ ಗಾಂಧಿಯವರ ಕಡೆಗೆ ಆಕರ್ಷಿತರಾದರು. 1921ರಲ್ಲಿ ಶ್ರೀ। ವಿಜಯರಾಘವಾಚಾರ್ಯರರ ಮನೆಯಲ್ಲಿ ರಾಜಾಜಿಯವರು ಗಾಂಧಿಜಿಯವರನ್ನು ಪ್ರಥಮತಃ ಭೇಟಿಯಾದರು; ಪ್ರತ್ಯಕ್ಷ ಮಾತುಕತೆಗಳಿಂದ ಪರಿಚಯ ಮಾಡಿಕೊಂಡರು. ಈ ಭೇಟಿಯಿಂದ ರಾಜಾಜಿಯವರು ತುಂಬ ಪ್ರಭಾವಿತರಾದರು; ಅವರಲ್ಲಿ ಸುಪ್ತವಾಗಿದ್ದ ದೇಶಾಭಿಮಾನವು ಪ್ರಕಾಶಗೊಂಡಿತು.

ರಾಜಾಜಿಯವರು ಬಿಚ್ಚುಮನಸ್ಸಿನ, ಸ್ಪಷ್ಟವಾಕ್ಯಗಳ, ತೀಕ್ಷ್ಣಟೀಕೆಗಳ ಮನುಷ್ಯರಾಗಿರುವರು. ಮಹಾತ್ಮರು ಅವರ ಗುಣಗಳನ್ನು ತುಂಬ ಮೆಚ್ಚುತಿದ್ದರು.

ಮಹಾತ್ಮರ ದರ್ಶನಾನಂತರ, ರಾಜಾಜಿಯವರು ನೇರವಾಗಿ ರಾಜಕೀಯಗಳಿಗೆ ಧುಮುಕಿದರು. ತನ್ನ ವಕೀಲೀವೃತ್ತಿಯನ್ನು ಬಿಟ್ಟರು. ಅ

ಕಾಲದಲ್ಲಿ ವರ್ಷಕ್ಕೆ ಅರ್ಧ ಲಕ್ಷ ರೂಪಾಯಿಗಳಿಗೂ ಮಿಕ್ಕಿದ ವರಮಾನ ಬರುತ್ತಿದ್ದ ವೃತ್ತಿಯನ್ನು ಬಿಟ್ಟುಕೊಟ್ಟ ತ್ಯಾಗಿಗಳಲ್ಲಿ (ಶ್ರೀ। ಚಿತ್ತರಂಜನ ದಾಸರಂಥ ತ್ಯಾಗಿಗಳ ಸಾಲಿನಲ್ಲಿ) ರಾಜಾಜಿಯವರೂ ಒಬ್ಬರು. ಅವರು, ಹೇರಳ ಧನವನ್ನು ಸಂಪಾದಿಸಿದರೂ, ಜೀವನದ ವಿಲಾಸಗಳಿಲ್ಲದೆ ಸೌಮ್ಯತರ ಜೀವನವನ್ನೆ ನಡೆಸುತಿದ್ದವರು. ನಿಪುಣನಾಗಿ ಹಣವನ್ನು ಕೂಡಿಡದೆ, ಜನರಿಗೆ ಸಹಾಯವಿತ್ತು, ಸದ್ವಿನಿಯೋಗ ಮಾಡುತಿದ್ದವರು.

ರಾಜಾಜಿಯವರು ವರಿಷ್ಠ ಕೊಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿಯೂ ಸೇವೆ ಸಲಿಸಿದವರು. ಕೊಂಗ್ರೆಸ್ ಕಮಿಟಿಯಲ್ಲಿ ಇವರ ಅಭಿಪ್ರಾಯಗಳಿಗೆ ಬಹುಮಾನ್ಯತೆ ದೊರೆಯುತಿತ್ತು.

ರಾಜಾಜಿಯವರು ಅತ್ಯಂತ ಕುಶಾಗ್ರಮತಿ. ವಾದದಲ್ಲಿ ಇವರೊಡನೆ ಜಯಿಸುವುದು ಪ್ರಯಾಸಕರ. ಸತ್ಯ ಪ್ರತಿಪಾದಕರು; ನಿರ್ಭೀತಿಯಿಂದ ತಮ್ಮ ಅಭಿಪ್ರಾಯಗಳನ್ನು ಕೊಡುವವರು. ಅಸಾಧಾರಣ ವಾಗ್ಮಿ, ವಿನೋದ ಭಾಷಿ.

ಅವರು ಒಬ್ಬ ಒಳ್ಳೇ ಕತೆಗಾರರು ಎಂಬುದನ್ನು ಹಲವರು ಬಲ್ಲರು. ರಾಜಾಜಿಯವರ ಸಣ್ಣ ಕಥೆಗಳು ಅತ್ಯಂತ ಪ್ರಸಿದ್ಧ ಇವೆ. ಪ್ರತಿಯೊಂದು ಕಥೆಯೂ ಮಾನವ ಪ್ರೇಮ-ಭೂತ ದಯೆ-ಔದಾರ್ಯ ಮೊದಲಾದುವನ್ನು ಬೋಧಿಸುತ್ತಿವೆ.

ಕಂಬನ್ ರಾಮಾಯಣವನ್ನು ತಮಿಳಿನಲ್ಲಿ ಮನೋಹರ ಗದ್ಯದಲ್ಲಿ ಬರೆದೂ ವಿಖ್ಯಾತರಾಗಿದ್ದಾರೆ. ಮಹಾಭಾರತವನ್ನು ತಮಿಳಿನಲ್ಲೂ ಇಂಗ್ಲಿಷಿನಲ್ಲೂ ಬರೆದಿರುತ್ತಾರೆ. ಅವರ ತಮಿಳು ಶೈಲಿಯಂತೆಯೇ ಇಂಗ್ಲಿಷ್ ಶೈಲಿಯೂ ಲಲಿತವಿದೆ. ಕನ್ನಡವನ್ನೂ ಚೆನ್ನಾಗಿ ಬಲ್ಲರು.

ರಾಜಾಜಿಯವರ ಕಥೆಗಳಿಂದ ಒಂದನ್ನು ಆರಿಸಿ, ಈ ಪುಸ್ತಕದಲ್ಲಿ ಕೊಟ್ಟಿರುವೆವು. ದೀಪಾವಳಿಯ ದಿನ ನಡೆದ ಒಂದು ಘಟನೆಯಾದುದರಿಂದ, ಸಂದರ್ಭೋಚಿತವೆನಿಸಿ, ಈ ದೀಪಾವಳಿಯಂದು ವಾಚಕಲೋಕಕ್ಕೆ ಒಪ್ಪಿಸಿದ್ದೇವೆ.

ಸಂಪಾದಕ.

ನಿರಪರಾಧಿ

ಬಾಲು, ತಾಯಿಯಿಲ್ಲದ ಮಗು. ಬರೀ ನಾಲ್ಕು ವರ್ಷ ಪ್ರಾಯದ ಪಸುಳೆ. ಅವನ ತಂದೆ ಮಾಧವರಾಯನಿಗೆ, ಈ ಮಗುವಿನ ಮೇಲೆ ಅತಿಯಾದ ಮಮತೆಯಿದ್ದಿತು. ಮಾಧವರಾಯನು ತನ್ನ ಮೊದಲನೇ ಹೆಂಡತಿ ತೀರಿಹೋದ ಕೆಲಕಾಲಾನಂತರ ದ್ವಿತೀಯ ಸಂಬಂಧವನ್ನು ಮಾಡಿಕೊಂಡಿದ್ದನು. ಎರಡನೇ ಹೆಂಡತಿ ಸೀತಮ್ಮಳು, "ಬಾಲುವು ಅತಿಯಾಗಿ ಮುದ್ದಿಸಲ್ಪಟ್ಟು ಕೆಡಿಸಲ್ಪಟ್ಟ ಮಗುವಾಗಿದೆ" ಎಂದು ಯಾವಾಗಲೂ ದೂರುತಿದ್ದಳು.

ದೀಪಾವಳಿಯ ಮುಂಚಿನ ದಿನ ಸಾಯಂಕಾಲದ ಸಮಯ ದಾಟಿತ್ತು. ಅಂದು ಮಧ್ಯಾಹ್ನ ಮನೆಯಿಂದ ಹೊರಗೆ ಹೋಗಿದ್ದ ಬಾಲು, ಅಷ್ಟು ಹೊತ್ತು ಮೀರಿದ್ದರೂ, ಇನ್ನೂ ಮನೆಗೆ ಮರಳಿರಲಿಲ್ಲ. ಮಾಧವರಾಯನೂ ಸೀತಮ್ಮಳೂ ಬಾಲುವಿನ ಬರವನ್ನು ನಿರೀಕ್ಷಿಸುತ್ತ ನಿರೀಕ್ಷಿಸುತ್ತ, ಹೊತ್ತುಮೀರಿದುದನ್ನು ಕಂಡು ಕಳವಳಕ್ಕೂ ಒಳಗಾದರು. ತೀರ ಚಿಕ್ಕವನು—ಪ್ರಾಯಶಃ ಅವನು ದಾರಿತಪ್ಪಿರಬಹುದು—ಇಲ್ಲವೇ ಸುಮ್ಮನೆ ಅತ್ತಿತ್ತ ಅಲೆದಾಡುತ್ತಿರಬಹುದು—ಇನ್ನು ತುಸುಹೊತ್ತಿನೊಳಗೆ ಬಂದೇ ಬರುವನು—ಎಂದು ಆಶಿಸಿದರು. ಆದರೆ, ಬಾಲುವಿನ ಸುಳಿವೇ ಇಲ್ಲ.

ರಾತ್ರಿ ಎಂಟು ಘಂಟೆ ಬಡಿಯಿತು. ಹೊತ್ತುಮೀರುತ್ತ ಹೋಯಿತು. ಇಲ್ಲ,—ಬಾಲಕನು ಇನ್ನೂ ಬರಲಿಲ್ಲ. ದಂಪತಿಗಳು ವ್ಯಾಕುಲಗೊಂಡರು. ಅವರ ಆತುರ ಹೆಚ್ಚಿತು. ಇನ್ನೂ ಸುಮ್ಮಗಿರಲಾಗುವುದಿಲ್ಲವೆಂದುಕೊಂಡು, ಅವರು ಸ್ನೇಹಿತರ ಮನೆಗಳಲ್ಲಿ ವಿಚಾರಿಸಿದರು. ಕೇಳಿದ ಕಡೆಗಳಲ್ಲೆಲ್ಲ—ಅವನ ಕುರಿತು ಏನೂ ತಿಳಿದಿರಲಿಲ್ಲ.

ಕಳವಳ ಹೆಚ್ಚಿತು. ಅವನನ್ನು ಹುಡುಕಲು ಊರಿನ ಎಲ್ಲ ಕಡೆಗೂ ಜನರನ್ನು ಕಳುಹಿಸಿದರು. ಹುಡುಗನ ಪತ್ತೆಯೇ ಇಲ್ಲ. ಪರಿಚಿತರ ಮನೆಗಳಲ್ಲಿ ಏನೂ ತಿಳಿಯರು—ಆಟದ ಬಯಲುಗಳಲ್ಲಿ ಅವನು ಕಾಣಸಿಗಲಿಲ್ಲ—ಎಲ್ಲಿಯೂ ಅವನ ಕುರುಹು ಇಲ್ಲ.

ಕಟ್ಟಕಡೆಗೆ, ರಾತ್ರಿ ಹತ್ತು ಗಂಟೆಗೆ, ಮಾಧವರಾಯನು ಪೋಲೀಸ್ ಠಾಣ್ಯಕ್ಕೆ ಹೋಗಿ, ಕಾಣೆಯಾದ ಹುಡುಗನ ಕುರಿತು ವರದಿಯಿತ್ತನು.

"ಹುಡುಗನ ಮೈಮೇಲೆ ಏನಾದರೂ ಆಭರಣಗಳಿದ್ದುವೇ?"–ಇನ್ಸ್ಪೆಕ್ಟರ್ ಸಾಂತಪ್ಪ ಪಿಳ್ಳೆ ವಿಚಾರಿಸಿದನು.

"ಏನೂ ಇಲ್ಲ;—ಒಂದು ಜತೆ ಬೆಳ್ಳಿಯ ಕಾಲುಖಡಗಗಳ ಹೊರತು ಮತ್ತೇನೂ ಇರಲಿಲ್ಲ"—ಎಂದು ಮಾಧವರಾಯನು ಹೇಳಿದನು.

"ಕಾಲ್ಖಡಗದ ಬೆಲೆ ಅಂದಾಜಿಗೆ ಎಷ್ಟು ಆಗಬಹುದು?"—ಇನ್ಸ್ಪೆಕ್ಟರನು ಪ್ರಶ್ನಿಸಿದನು.

ಮಾಧವರಾಯನು ಕೂಡಲೇ ಉತ್ತರವಿತ್ತನು: "ಅಷ್ಟೇನೂ ಮೌಲ್ಯದ ವಸ್ತುವಲ್ಲ. ಬರೇ ಟೊಳ್ಳು ಒಡವೆ. ಅದರ ಬೆಲೆ ಮೂರು ರೂಪಾಯಿಗಳಷ್ಟು ಕೂಡ ಆಗಲಾರದು."

o o o o o

ದೀಪಾವಳಿಯ ಹರ್ಷದ ಸಾಮ್ರಾಜ್ಯವೇ ಹಬ್ಬಿತ್ತು. ಸಿಡಿಯುವ ಪಟಾಕಿಗಳ ಶಬ್ದ ಮತ್ತು ನೆರೆಹೊರೆಯ ಮನೆಗಳಲ್ಲಿನ ಸರ್ವಸಾಮಾನ್ಯವಾದ ಉಲ್ಲಾಸ—ಉತ್ಸಾಹಗಳ ವಾತಾವರಣವು ಮಾಧವರಾಯನನ್ನು ಇನ್ನೂ ಹೆಚ್ಚಾಗಿ ಕಳವಳಕ್ಕೀಡುಮಾಡಿತು. ಅವನು ಬಿರಿದ ಹೃದಯದಿಂದ ಕಂಗೆಟ್ಟಿದ್ದನು. ಆತ್ಯಾತುರದಿಂದ, ಕಾಣೆಯಾಗಿದ್ದ ತನ್ನ ಮಗುವಿನ ಕುರಿತು ಏನಾದರೂ ಸುದ್ದಿ ಬರುವುದೇ ಎಂದು ಕಾಯುತಿದ್ದನು. ಅಂದಿನ ರಾತ್ರೆಯನ್ನು. ಯೋಚನಾಪರನಾಗಿ, ಕಳವಳಿಸಿ, ನಿದ್ದೆಯಿಲ್ಲದೆನೇ ಕಳೆದನು.

ಮರುದಿನ ಸೀತಮ್ಮಳು ಹೇಳಿದಳು: "ನಮ್ಮ ಮನೆಯಾಳಿನ ಕುರಿತು ನಾನು ನಿಮಗೆ ಆಗಾಗ್ಗೆ ಎಚ್ಚರಿಕೆ ಕೊಟ್ಟಿದ್ದೆ. ಆದರೆ, ನೀವು ಮಾತ್ರ ಅದಕ್ಕೆ ಕಿವಿಗೊಡಲಿಲ್ಲ. ಅವನೇ ಮಗುವಿಗೆ ಏನಾದರೂ ಮಾಡಿರಬೇಕು ಎಂದು ನನಗೆ ಅನಿಸಹತ್ತಿದೆ. ಅವನ ಮುಖಲಕ್ಷಣವನ್ನು ನಾನು ಮೆಚ್ಚುವುದಿಲ್ಲ."

"ಆ ನಿರ್ಭಾಗಿ, ಪಾಪದವನ ಮೇಲೇಕೆ ನೀನು ತಪ್ಪು ಹೊರಿಸುವೆ?"—ಮಾಧವರಾಯನು ಕೇಳಿದನು. "ಅವನು ರಾತ್ರಿ ಎಂಟು ಗಂಟೆಯ

ವರೆಗೆ ಇಲ್ಲಿಯೇ ಇದ್ದನು. ಮಗುವು ನಾಲ್ಕು ಗಂಟೆಯಿಂದಲೇ ಕಾಣೆಯಾಗಿದೆ."

ಸಣ್ಣ ಅಥವಾ ಅಪ್ರಧಾನ ವಿಷಯಗಳು, ಕೆಲವೊಮ್ಮೆ ವ್ಯಥೆ ಮತ್ತು ವ್ಯಾಕುಲದಿಂದ ಬಿರಿದ ಮನಸ್ಸಿನ ಮೇಲೆ ಅಸಾಧಾರಣವಾದ ಸ್ಪಷ್ಟ ಪರಿಣಾಮವನ್ನುಂಟುಮಾಡುತ್ತವೆ.

ಸೀತಮ್ಮಳು ಪ್ರತಿಪಾದಿಸಿದಳು: "ಸಾಮಾನ್ಯವಾಗಿ ಕಣ್ಣನ್ (ಮನೆಯಾಳು) ಮಧ್ಯಾಹ್ನದ ಮೇಲೆ ಮೂರು ಗಂಟೆಗೆ ಬರುತ್ತಾನೆ. ಈ ದಿನ ಮಾತ್ರ ಅವನು ಐದು ಗಂಟೆಗೆ ಬಂದನು. ಅಷ್ಟು ತಡವಾಯಿತೇಕೆಂದು ನಾನು ಅವನನ್ನು ಪ್ರಶ್ನಿಸಿದಾಗ, ತಾನು ಪೇಟೆಗೆ "ನೊನ್ಬು"*ಗೆ ಸಾಮಾನುಗಳನ್ನು ಕೊಂಡುಕೊಳ್ಳಲಿಕ್ಕೆ ಹೋಗಿದ್ದೆನೆಂದು ಒಂದು ಕಾರಣ ಹೇಳಿದನು. ನನಗೇಕೋ ಅವನ ವಿಷಯದಲ್ಲಿ ಸಂಶಯಗಳಿವೆ."

ಪಕ್ಕದ ಮನೆಯಲ್ಲಿ ವಾಸಿಸುತಿದ್ದ ಗೋಪಾಲರಾಯನು ಆ ಅಭಿಪ್ರಾಯವನ್ನು ಸಮರ್ಥಿಸಿದನು. ಅವನು ಹೇಳಿದನು: "ಮಾಧವರಾವ್, ಸಂದೇಹಕ್ಕೆ ಆಧಾರಗಳಿವೆ. ನೋಡು—ಈ ಗೃಹಕೃತ್ಯದ ಸೇವಕರ ಪರೋಕ್ಷ ಸಮ್ಮತಿಯಿಲ್ಲದೆ ಯಾವುದೂ ಸಂಭವಿಸುವುದಿಲ್ಲ."

ವಕೀಲರ ಗುಮಾಸ್ತ ವಾಸುದೇವ ಅಯ್ಯರನು ತನ್ನ ಅಭಿಪ್ರಾಯವನ್ನಿತ್ತನು: "ಮಾಧವರಾವ್, ಕಣ್ಣನನು ಮೇಲಿನತ್ತಮ್‌ಪಳ್ಳ ರಸ್ತೆಯಲ್ಲಿರುವ ಒಂದು ಗುಡಿಸಲಿನಲ್ಲಿ ಉಳಕೊಳ್ಳುತ್ತಾನೆ. ಅವನ ಕುರಿತು ನಾವು ಈಗಲೇ ಪೋಲೀಸರಿಗೆ ವರದಿಮಾಡೋಣ."

o o o o

ಹೀಗೆ ರಾತ್ರಿ ಕಳೆಯಿತು. ದೀಪಾವಳಿಯ ಶಬ್ದಗಳು ಪ್ರಭಾತದ ಆಗಮನವನ್ನು ಸೂಚಿಸಿದುವು. ಅಕ್ಕಪಕ್ಕದ ಮನೆಗಳಲ್ಲಿ, ಪಟಾಕಿಯ ಸಿಡಿತವು, ಪಾತ್ರೆಗಳೊಳಗೆ ಹೊಯ್ಯಲ್ಪಡುವ ನೀರಿನ ಶಬ್ದದೊಂದಿಗೆ ಸೇರಿತು.

ಮಾಧವರಾಯನಿಗೆ ಅವನ ನಿಟ್ಟುಸಿರನ್ನೂ ಕಣ್ಣೀರನ್ನೂ ತಡೆದುಕೊಳ್ಳುವುದು ಬಹಳ ಕಷ್ಟವಾಯಿತು; ಅವನ ಮೊದಲನೆಯ ಹೆಂಡತಿಯ

---

* ತಮಿಳರಲ್ಲಿ ಹಬ್ಬದ ದಿನದಂದು ಒಂದು ಧರ್ಮಾಚರಣೆ.

(ಬಾಲುವಿನ ತಾಯಿಯ) ಸ್ಮರಣೆಗಳು ಒಂದರ ಮೇಲೊಂದು ಕಿಕ್ಕಿರಿದು ಅವನ ಮನಸ್ಸನ್ನು ತುಂಬಿದುವು.

ಮಾಧವರಾಯನು ತನ್ನನ್ನೇ ತಡೆದುಕೊಳ್ಳಲಾರದೆ ಹೋದನು. ಅವನಿಗೆ ಉಗ್ರ ವ್ಯಥೆಯು ಅಂಟಿಕೊಂಡಿತ್ತು. ಅವನು ಗಟ್ಟಿಯಾಗಿ ಕೂಗಿದನು: "ನನ್ನ ಮುದ್ದು ಮಗೂ! ನೀನು ಯಾರ ನಿರ್ದಯ, ಕ್ರೂರ ಮುಷ್ಟಿಗಳಲ್ಲಿ ಸಿಕ್ಕಿಬಿದ್ದಿರುವಿ! ದುರದೃಷ್ಟಶಾಲಿಯಾದ ನನ್ನ ಮಗುವು ಎಂಥ ಕಷ್ಟಗಳಿಗೆ ಈಡಾಗಿರುವುದೋ! ಹಾಯ್!"

ಸೀತಮ್ಮಳು ಅವನನ್ನು ಸಮಾಧಾನಪಡಿಸಿದಳು: "ಇಸ್ಸಿ! ಈ ರೀತಿ ವ್ಯಥೆಗೊಳ್ಳುತ್ತಿರುವಿರೇಕೆ? ಸಮಾಧಾನ ತಾಳಿರಿ. ಮಗುವು ಮರಳಿ ಬರುವುದು. ದೇವರು ಅವನನ್ನು ರಕ್ಷಿಸುವನು!"

০ ০ ০ ০

ಮಧ್ಯಾಹ್ನ ಹನ್ನೆರಡು ಘಂಟೆಗೆ ಅವರಿಗೆ ತಿಳಿದುಬಂತು: ಪೋಲೀಸ ರಿಗೆ ಏನೋ ಸೂಚನ ಸಿಕ್ಕಿದೆ.

ಕೂಡಲೇ "ಪೋಲೀಸ್ ಠಾಣ್ಯಕ್ಕೆ ಹೋಗಿರಿ; ಮತ್ತು ತಿಳಿದು ಕೊಂಡು ಬನ್ನಿರಿ"—ಎಂದು ಸೀತಮ್ಮಳು ಗಂಡನಿಗೆ ಹೇಳಿದಳು.

ಮಾಧವರಾಯನ ಮನೆತೋಟದ ಮಾಲಿ ಮತ್ತು ಸೇವಕನಾದ ಕಣ್ಣನನು ಪೋಲೀಸ್ ಬಂಧನಗೃಹದಲ್ಲಿ ಇರಿಸಲ್ಪಟ್ಟಿದ್ದನು. ಪೋಲೀಸರು ಅವನ ಮನೆಯ ಝಡ್ತಿ ನಡೆಸಿದ್ದರು. ಮತ್ತು ಕೆಲವು ಉಡುಪುಗಳನ್ನೂ ಒಂದು ಪಟಾಕಿ ಪೊಟ್ಟಣವನ್ನೂ ಸ್ವಾಧೀನಮಾಡಿಕೊಂಡಿದ್ದರು. ಮಾಧವ ರಾಯನು ಆ ಬಟ್ಟೆಗಳನ್ನು ನೋಡಿದನು; ಅವುಗಳು ತನ್ನ ಮಗುವಿನದ್ದಲ್ಲ ವೆಂದು ಹೇಳಿದನು.

ಬಾಲುವಿನ ಸೋದರಮಾವ ರಾಮಚಂದ್ರರಾಯನು, ತಾನು ಮುಂ ಚಿನ ದಿನ ಹುಡುಗನಿಗೆ ಕೊಟ್ಟಿದ್ದ ಪಟಾಕಿ ಪೊಟ್ಟಣವು ಅದೇ, ಎಂದು ಆಣೆಯಿಟ್ಟು ಹೇಳಿದನು. ಈ ಪುರಾವೆಯನ್ನು ಕೇಳಿದೊಡನೆ ಪೋಲೀಸ್ ಇನ್ಸ್‌ಪೆಕ್ಟರನು ಅಪಾರವಾಗಿ ಆನಂದಿತನಾದಂತೆ ತೋರಿದನು.

ಪೋಲೀಸರ ತನಿಖೆಯ ಗತಿಯಲ್ಲಿ ಬೇರೆ ವಿಷಯಗಳು ಹೊರ ಬಂದುವು. ಬಾಲುವು ಕಣ್ಣನನೊಟ್ಟಿಗೆ ಪೇಟೆಯಲ್ಲಿ ಪೂರ್ವಾಭಿಮುಖ

ವಾಗಿ ಹೋಗುತ್ತಿದ್ದುದನ್ನು ತಾವು ನೋಡಿರುವರೆಂದು ಹೇಳುವ, ಕಣ್ಣಾರೆ ಕಂಡ ಸಾಕ್ಷಿಗಳಿಂದ ಸಾಕ್ಷ್ಯಗಳನ್ನು ಪೋಲೀಸರು ಸಂಗ್ರಹಿಸಿದರು. ಬಾಲುವಿನ ಕೈಯಲ್ಲಿ ಒಂದು ಪಟಾಕಿಪೊಟ್ಟಣವನ್ನು ತಾವು ನೋಡಿರುವೆವೆಂದು ಕೆಲವರು ಹೇಳಿದರು. ಸ್ಥಳೀಯ ಹುಡುಗಿಯರ ಶಾಲೆಯಲ್ಲಿಯ ಜವಾನ, ವಯಸ್ಸಾದ ವೇಲು ಪಿಳ್ಳೆಯು, ಕಣ್ಣನನು ಆ ಮಗುವಿಗೆ ಒಂದು ಬಾಳೆ ಹಣ್ಣನ್ನು ಕೊಡುವುದನ್ನು ನೋಡಿದ್ದನು.

ಪ್ರಶ್ನಿಸಿದಾಗ ಕಣ್ಣನನು ತನಗೇನೂ ತಿಳಿದಿರುವುದಿಲ್ಲವೆಂದು ಪ್ರಮಾಣಮಾಡಿದನು; ಮತ್ತು ತಾನು ಆ ದಿನ ಹುಡುಗನೊಟ್ಟಿಗೆ ಪೇಟೆಗೆ ಹೋಗಿದ್ದನೆಂಬುದನ್ನು ನಿರಾಕರಿಸಿದನು. ವೇಲು ಪಿಳ್ಳೆಯ ವಾಜ್ಮೂಲದ ಕುರಿತು ಕೇಳಿದಾಗ, ಕಣ್ಣನನು ಅದನ್ನು ಪಟ್ಟನಿಂದ ನಿರಾಕರಿಸಿದನು: "ಅದು ಸುಳ್ಳು! ಅವನು ಹಾಗೇಕೆ ಹೇಳುವನೆಂದು ನನಗೆ ತಿಳಿದಿಲ್ಲ," ಎಂದು ಅವನು ಹೇಳಿದನು. ಆದರೆ ಆ ವಿಷಯದಲ್ಲಿ ಸಮಜಾಯಿಷಿ ಕೊಡಲು ಅವನಿಂದಾಗಲಿಲ್ಲ.

"ಅದು ಬಹಳ ಶಂಕಾಸ್ಪದವಾಗಿ ತೋರುತ್ತದೆ," ಎಂದು ಇನ್‌ಸ್ಪೆಕ್ಟರನು ಟೀಕೆ ಮಾಡಿದನು.

o o o o

"ಅವನನ್ನು ಚೆನ್ನಾಗಿ ಸದೆಬಡೆಯಿರಿ; ಆಗ ನಿಜಸ್ಥಿತಿಯು ಹೊರಗೆ ಬರುವುದು," ಎಂದು ಸೀತಮ್ಮಳು ಹೇಳಿದಳು.

"ಪೋಲೀಸರು ಅದೆಲ್ಲವನ್ನೂ ಬಹಳ ಚೆನ್ನಾಗಿಯೇ ಮಾಡುವರು," ಎಂದು ವಕೀಲರ ಗುಮಾಸ್ತ, ವಾಸುದೇವ ಅಯ್ಯರನು ಹೇಳಿದನು.

ಮಾಧವರಾಯನು ಏನೂ ಟೀಕೆ ಮಾಡಲಿಲ್ಲ.

"ಹೋ ದೇವರೇ!" ನೆಲ ಗುಡಿಸುತ್ತಿದ್ದ ಹೆಣ್ಣಾಳು ಕುಂಜಮ್ಮಳು ಮುಲುಕುತ್ತ ಹೇಳಿದಳು.

o o o o

"ಅಯ್ಯೋ! ಅವರು ನನ್ನ ಮಗನಿಗೆ ಅನ್ಯಾಯವಾಗಿ ಚಿತ್ರಹಿಂಸೆ ಕೊಡುತ್ತಾರೆ! ಅವರು ಅವನ ಬೆರಳುಗಳೊಳಗೆ ಸೂಜಿಗಳನ್ನು ದಬ್ಬುತ್ತಾರೆ." ಒಬ್ಬ ವಯಸ್ಸಾದ ಹೆಂಗಸು ಮಾಧವರಾಯನ ಮನೆಯ ಮುಂದೆ

ಚೀತ್ಕರಿಸಿದಳು. ಅವಳ ಪಕ್ಕದಲ್ಲಿ, ಅವಳ ಸೀರೆಯನ್ನು ಹಿಡಿದು ಕೊಂಡಿದ್ದ, ಒಂದು ಮಗುವಿತ್ತು.

"ಅವರು ಅಂಥದ್ದೇನೂ ಮಾಡುವುದಿಲ್ಲ. ಅವರು ಪ್ರಶ್ನೆಗಳನ್ನಷ್ಟೇ ಕೇಳುತ್ತಾರೆ. ಅವನು ಸತ್ಯವನ್ನು ಹೇಳಲಿ.'' ವಕೀಲರ ಗುಮಾಸ್ತ ವಾಸುದೇವ ಅಯ್ಯರನು ತಿಳಿವಳಿಕೆ ಹೇಳಿದನು.

"ಅಯ್ಯೋ—ಸ್ವಾಮಿ, ನಾವು ನಿರಪರಾಧಿಗಳು! ನನ್ನ ಮಗನು ನಿರಪರಾಧಿ! ಅವರು ನನ್ನ ಮಗನನ್ನು ಕೊಲ್ಲುವರು! ನಮ್ಮನ್ನು ರಕ್ಷಿಸಿರಿ! ನಮಗೆ ಬೇರೆ ಯಾವ ಆಸೆಯು ನೆಲೆಯೂ ಇಲ್ಲ! ಈ ಮಗುವಿನ ಆಣೆಯಿಟ್ಟು ನಾನು ಹೇಳುವೆನು." ಆ ಮುಪ್ಪಿನ ಹೆಂಗಸು ಹೇಳಿಕೊಂಡಳು ಮತ್ತು ಗಟ್ಟಿಯಾಗಿ ಪ್ರಲಾಪಿಸಿದಳು.

"ಬಾಯಿ ಮುಚ್ಚು! ನೀನು ಗದ್ದಲ ಮಾಡಿದರೆ ನಿನ್ನನ್ನು ಸಹ ಜೈಲಿನೊಳಗೆ ಹಾಕಲಾಗುವುದು! ತಿಳಿಯಿತೆ?'' ವಾಸುದೇವ ಅಯ್ಯರನು ಹೆದರಿಸಿದನು.

"ಹಾಯ್! ಕರುಣಾಮಯ ದೇವರೇ!'' ಎಂದು ಹೇಳಿ ಮುದುಕಿಯು ಅಳುತ್ತ, ಗೋಳಾಡುತ್ತ, ಪೋಲೀಸ್ ಠಾಣ್ಯದ ಕಡೆಗೆ ಹೊರಟು ಹೋದಳು.

ಂ ಂ ಂ ಂ

ಮರುದಿನ ಬೆಳಗ್ಗೆ ಎಂಟು ಗಂಟೆಯ ಹೊತ್ತಿಗೆ ಕೆಲವು ದನಕಾಯುವವರು, ಊರಿನ ಉತ್ತರ ದಿಕ್ಕಿನಲ್ಲಿ ಒಂದು ಕೆರೆಯಲ್ಲಿ ತೇಲಾಡುತ್ತಿದ್ದ ಒಬ್ಬ ಹುಡುಗನ ದೇಹವನ್ನು ಕಂಡರು; ಮತ್ತು ಅವರು ಈ ಸಮಾಚಾರವನ್ನು ಪೋಲೀಸರಿಗೆ ತಿಳಿಸಿದರು. ಪೋಲೀಸರು ಮಾಧವರಾಯನನ್ನು ಶವಪರೀಕ್ಷೆಗೆ ಕರೆದುಕೊಂಡುಹೋದರು.

ಹುಡುಗನ ಕುತ್ತಿಗೆಯ ಮೇಲೆ ಕತ್ತುಹಿಸುಕಿದ ಗುರುತುಗಳಿದ್ದುವು. ಬೇರೆ ಯಾವ ಗಾಯಗಳೂ ತೋರುತ್ತಿರಲಿಲ್ಲ. ಪಾದಗಳಲ್ಲಿ ಕಾಲ್ಪಡಗಗಳು ಇರಲಿಲ್ಲ. ಹಾಗಿದ್ದರೂ ಕಾಲ್ಪಡಗಗಳಿಂದಾದ ಕಪ್ಪನೆಯ ಚಿಹ್ನೆಯು ಗುರುತಿಸಲ್ಪಟ್ಟಿತು. ಸುತ್ತುಮುತ್ತ ಗುಂಪುಕೂಡಿದ್ದ ಜನರು ದುಃಖದಿಂದ ತಮ್ಮ ತಲೆಗಳನ್ನು ಅಲ್ಲಾಡಿಸಿದರು; ಮತ್ತು ಹೇಳಿದರು: "ಮೂರು

ರೂಪಾಯಿ ಬೆಲೆಯ ಕಾಲ್ಬಡಗಕ್ಕಾಗಿ ದುರದೃಷ್ಟಶಾಲಿಯಾದ ಹುಡುಗನು ಕೊಲ್ಲಲ್ಪಟ್ಟನು!"

ಶವಪರೀಕ್ಷೆಯಲ್ಲಿ ಹುಡುಗನು ಕುತ್ತಿಗೆಯ ಸುತ್ತು ಕುಣಿಕೆಯಿಂದ ಹಿಸುಕಿ ಕೊಲ್ಲಲ್ಪಟ್ಟನೆಂದು ಕಂಡಿತು; ಮತ್ತು ಅವನ ಹೊಟ್ಟೆಯೊಳಗೆ ಜೀರ್ಣಿಸಿಕೊಂಡಿಲ್ಲದ ಒಂದು ಬಾಳೆಹಣ್ಣು ಸಹ ಕಂಡುಬಂತು. ಪರಿಸ್ಥಿತಿಯು ಕಣ್ಣನನ ವಿರುದ್ಧವಾಗಿ ಹೆಚ್ಚು ದೃಢವಾಗಿ ಬೆಳೆಯುತ್ತಿತ್ತು; ಪೋಲೀಸರು ತನಿಖೆಯನ್ನು ಹೆಚ್ಚು ಹುರುಪಿನಿಂದ ಮುಂದುವರಿಸಿದರು. ಮತ್ತು ಹೆಚ್ಚಿಗೆ ಕೆಲವು ಸಾಕ್ಷಿಗಳನ್ನೂ ಒಪ್ಪಿಸಿಕೊಂಡರು.

o o o o

ಪೋಲೀಸರು ಬಂಧನಗೃಹದಲ್ಲಿದ್ದ ಕಣ್ಣನನನ್ನು ಬೆದರಿಸಿದರು; ತೆಗಳಿದರು; ಮತ್ತು ಪ್ರಶ್ನೆಗಳಿಂದ ಪೀಡಿಸಿದರು.

"ಅವನನ್ನು ಬಾಳೆಹಣ್ಣಿನಿಂದ ಮಂಕುಗೊಳಿಸಿದ ಮೇಲೆ ನೀನು ಅವನನ್ನು ಎಲ್ಲಿ ಬಿಟ್ಟೆ? ಬೇಗ ಹೇಳು...."

ದಿಗ್ಭ್ರಮೆಗೊಂಡ ಮತ್ತು ದಿಗಿಲುಬಿದ್ದ ಮುಖಭಾವವೊಂದು ಮಾತ್ರ ಕಣ್ಣನನ ಉತ್ತರವಾಗಿತ್ತು.

"ಇವನ ವಿಷಯದಲ್ಲಿ ಸೌಮ್ಯವಾದ ವಿಧಾನಗಳನ್ನು ಉಪಯೋಗಿಸುವುದರಿಂದ ಪ್ರಯೋಜನವಿಲ್ಲ. ಅವನನ್ನು ಒಳಗೆ ಹಾಕಿ ಬೀಗ ಹಾಕಿರಿ. ರಾತ್ರಿಯಲ್ಲಿ ನಾನೇ ಬಂದು ಅವನನ್ನು ಪ್ರಶ್ನಿಸುವೆನು" ಈ ರೀತಿ ಬೆದರಿಕೆ ಹಾಕಿ ಹೆಡ್ ಕೋನ್‌ಸ್ಟೇಬಲ್ ಷಣ್ಮುಖಮನು ಹೊರಟನು. ಷಣ್ಮುಖಮನು, ಅವನ ಮೂರನೆಯ ಮಟ್ಟದ (third degree) ಮಾರ್ಗಗಳಿಗಾಗಿ, ಆ ಊರಿನಲ್ಲಿ ಚೆನ್ನಾಗಿ ಪರಿಚಿತನಾಗಿದ್ದನು.

"ನಾನು ಹಬ್ಬದ ಸಲುವಾಗಿ ಬಾಳೆಹಣ್ಣುಗಳನ್ನು ಕೊಂಡುಕೊಂಡೆನು. ಮಗುವು ಒಂದನ್ನು ಕೇಳಿತು; ನಾನು ಕೊಟ್ಟೆನು, ಮತ್ತು ಅವನನ್ನು ಮನೆಗೆ ಕಳುಹಿಸಿಕೊಟ್ಟೆನು. ಆ ಮೇಲೆ ನಾನು ಸ್ವಲ್ಪ ಬೆಲ್ಲ ಮತ್ತು ಎಣ್ಣೆಯನ್ನು ಕೊಂಡುಕೊಂಡು ನೇರವಾಗಿ ಮೇಲ ನತ್ತಮ್ಮಿಗೆ ಹೋದೆನು. ಅನಂತರ ನಾನು ನನ್ನ ಯಜಮಾನನ ಮನೆಗೆ ಹೋದೆನು. ನನಗೇಕೆ ತಡವಾಯಿತೆಂದು ಅಮ್ಮ (ಯಜಮಾನಿ) ಕೇಳಿದರು. ನನಗೆ 'ನೊನ್ಬು'ಗೆ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೆ ಪೇಟೆಗೆ ಹೋಗಲಿಕ್ಕಿತ್ತೆಂದು ನಾನು

ಉತ್ತರವಿತ್ತೆನು. ನೀವು ನನ್ನ ಮಾತುಗಳನ್ನು ನಂಬುವುದಿಲ್ಲವಾದರೆ ಅವ್ಳ ನೊಡನೆ ವಿಚಾರಿಸಿರಿ!'' ಕಣ್ಣನನು ಹೇಳಿಕೊಂಡನು.

ಂ ಂ ಂ ಂ

ಕಣ್ಣನನು ಹದಿನೈದು ದಿನಗಳ ವರೆಗೆ ಪೋಲೀಸ್ ಬಂಧನಗೃಹದಲ್ಲಿ ಇದ್ದನು. ಆ ಮೇಲೆ ಅವನ ವಿರೋಧವಾಗಿ ಆಪಾದನೆಯ ಪಟ್ಟಿಯು ದಾಖಲು ಮಾಡಲ್ಪಟ್ಟಿತು; ಮತ್ತು ಮೊಕದ್ದಮೆಯು ತನಿಖೆಗೆ ಬಂತು.

ಮೇಜಿಸ್ಟ್ರೇಟನು ಆ ಊರಿಗೆ ಹೊಸಬನಾಗಿದ್ದನು; ಅವನೊಬ್ಬ ದೈವ ಭೀತಿಯುಳ್ಳ ಕ್ರಿಸ್ತನಾಗಿದ್ದನು. ಅವನು ಹತ್ತು ಸಾಕ್ಷಿಗಳ ವಿಚಾರಣೆಮಾಡಿ ದನು. ಅವರು, ಅಡ್ಡ ವಿಚಾರಣೆ ಮಾಡಿದಾಗ, ಏನೂ ತಡವರಿಸದೆ, ವಾಜ್ಮೂಲ ಕೊಟ್ಟರು. ಕಣ್ಣನನು ಹುಡುಗನೊಟ್ಟಿಗೆ ಪೇಟೆಯಲ್ಲಿದ್ದನೆಂಬ, ಅವನು ಹುಡುಗನಿಗೆ ಒಂದು ಬಾಳೆಹಣ್ಣನ್ನು ಕೊಟ್ಟಿದ್ದನೆಂಬ ಮತ್ತು ಆ ಮೇಲೆ ಹುಡುಗನು ಅದೃಶ್ಯನಾದನೆಂಬ, ವಸ್ತುಸ್ಥಿತಿಗಳೆಲ್ಲ ರುಜುವಾತು ಮಾಡಲ್ಪಟ್ಟುವು.

ವೇಲು ಪಿಳ್ಳೆಯ ಸಾಕ್ಷ್ಯವು ನಿರ್ದಿಷ್ಟವಾಗಿತ್ತು.

ಪೋಲೀಸರು ಕಣ್ಣನನ ಮನೆಹೊಕ್ಕು ತಲಾಷು ಮಾಡಿದಾಗ ಅಲ್ಲಿ ಸಿಕ್ಕಿದ ಪಟಾಕಿ ಪೊಟ್ಟಣವೇ ತಾನು ಬಾಲುವಿಗೆ ಕೊಟ್ಟದ್ದ ಪೊಟ್ಟಣವೆಂಬ ಸಂಗತಿಯನ್ನು ರಾಮಚಂದ್ರರಾಯನು ಪ್ರಮಾಣಮಾಡಿ ಹೇಳಿದನು.

ಅಂಥ ಸಾಕ್ಷ್ಯಗಳ ಸಮ್ಮುಖದಲ್ಲಿ, ಕಣ್ಣನನು ಪ್ರಧಾನ ವ್ಯವಹಾರ ನ್ಯಾಯಸ್ಥಾನಕ್ಕೆ ಒಪ್ಪಿಸಲ್ಪಡುವನೆಂದು ಎಲ್ಲ ವಕೀಲರೂ ಎಣಿಸಿದ್ದರು.

ನಾಲ್ಕು ದಿನಗಳ ಅನಂತರ ಮೆಜಿಸ್ಟ್ರೇಟನು ಅವನ ತೀರ್ಪುಕೊಟ್ಟನು.

"ಸಾಕ್ಷ್ಯವು ಸಾಕಷ್ಟಿಲ್ಲ; ಸಾಕ್ಷಿಗಳು ಒಬ್ಬ ಕೆಳಜಾತಿಯ ಮನುಷ್ಯನ ಜೀವವನ್ನು ಅಸಡ್ಡೆಯಿಂದ ಕಂಡಿರುವಂತೆ ತೋರುತ್ತದೆ. ಅವರು ವಸ್ತು ಸ್ಥಿತಿಗಳನ್ನು, ತಾವೇ ಸ್ವತಃ ಕಲ್ಪಿಸಿದ ಸಂಗತಿಗಳೊಡನೆ ಬೆರಸಿದ್ದಾರೆ. ಹುಡುಗನು ಕೊಲ್ಲಲ್ಪಟ್ಟಿರುವನೆಂಬ ನಿಜಸ್ಥಿತಿಯ ಕುರಿತು ಅವರು ರೋಷ ದಿಂದ ಇಂಥ ಸಾಕ್ಷ್ಯವನ್ನು ಹೇಳಲು ಎಳೆಯಲ್ಪಟ್ಟಿರಬಹುದು.''

ಈ ಪ್ರಕಾರ ಮೇಜಿಸ್ಟ್ರೇಟನು ತನ್ನ ಅಭಿಪ್ರಾಯವನ್ನು ದಾಖಲು ಮಾಡಿ ಕಣ್ಣನನನ್ನು ಬಿಡುಗಡೆ ಮಾಡಿದನು

ಈ ತೀರ್ಪು ಆ ನಗರದ ಜನರಲ್ಲಿ ಮೇಜಿಸ್ಟ್ರೇಟನ ವಿರುದ್ಧವಾಗಿ ತೀವ್ರ ಅಸಮಾಧಾನವನ್ನುಂಟು ಮಾಡಿತು. ಅವರು ಅವನ ಕುರಿತು ಅಸಮ್ಮತಿ ಸೂಚಿಸುವ ಮಾತುಗಳನ್ನಾಡಿದರು; ಮತ್ತು ಅದೆಲ್ಲವೂ ಕೋಮು ವಾರು ದ್ವೇಷದಿಂದಾದುದು ಎಂದು ಹೇಳಿದರು. ಅವರು, ಕಣ್ಣನನ (ಪ್ರತಿವಾದಿಯ ಪರವಾಗಿದ್ದ) ವಕೀಲ, ವೀರ ರಾಘವ ಅಯ್ಯಂಗಾರನ ಕುರಿತು ಕೂಡ ಕೆಟ್ಟ ಮಾತುಗಳನ್ನಾಡಿದರು.

ಪ್ರಧಾನ ವ್ಯವಹಾರ ನ್ಯಾಯಸ್ಥಾನದಲ್ಲಿ ಹೊಸ ವಿಚಾರಣೆಯಾಗ ಬೇಕೆಂದು ಅಪೀಲು ದಾಖಲು ಮಾಡಲಾಯಿತು.

ಮಾಧವರಾಯನು ಅವರು ಹಾಗೆ ಮಾಡದಂತೆ ಅವರನ್ನು ತಡೆಯಲು ಯತ್ನಿಸಿದನು. ಅವನು ಹೇಳಿದನು: "ಬೇಡ, ನಾವು ಇದನ್ನು ಬಿಟ್ಟು ಬಿಡೋಣ. ಏನು ಸಂಭವಿಸಿದರೂ ನನ್ನ ಸತ್ತುಹೋದ ಮಗುವು ಹಿಂದೆ ಬರುವುದೇ?"

ಆದರೆ ಸ್ನೇಹಿತರು ಅಪೀಲನ್ನು ದಾಖಲು ಮಾಡುವಂತೆ ಅವನನ್ನು ಒಡಂಬಡಿಸಿದರು. ಅಪೀಲಿನ ವಿಚಾರಣೆಯಾಯಿತು. ಕೊನೆಯಲ್ಲಿ ನ್ಯಾಯಧೀಶನು, "ಬಿಡುಗಡೆಯು ಸರಿಯಾಗಿರಲಿಲ್ಲ; ಮೊಕದ್ದಮೆಯನ್ನು ಪ್ರಧಾನ ವ್ಯವಹಾರ ನ್ಯಾಯಸ್ಥಾನಕ್ಕೆ ಒಪ್ಪಿಸಬೇಕಾಗಿತ್ತು" ಎಂದು ತೀರ್ಪು ಕೊಟ್ಟನು. ನಗರದ ಜನರು ಆಗ ಸಂತೋಷಪಟ್ಟರು. ಪೋಲೀಸರು ಕಣ್ಣನನನ್ನು ಪುನಃ ಬಂಧಿಸಿದರು.

o o o o

ಮೂರು ತಿಂಗಳ ಅನಂತರ ಮೊಕದ್ದಮೆಯು ಪ್ರಧಾನ ವ್ಯವಹಾರ ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಬಂತು.

ರಾಮಚಂದ್ರರಾಯನು ಸಾಕ್ಷಿಕಟ್ಟೆಯಲ್ಲಿ ನಿಂತು ಚೆನ್ನಾಗಿ ಸಾಕ್ಷ್ಯ ಹೇಳಿದನು. ಕಣ್ಣನನ ಮನೆಯಲ್ಲಿ ಸಿಕ್ಕಿದ್ದ ಪಟಾಕಿ ಪೊಟ್ಟಣವು, ತಾನು ಬಾಲುವಿಗೆ ಕೊಟ್ಟಿದ್ದ ಪೊಟ್ಟಣವೇ ಎಂದು ಅವನು ದೃಢವಾಗಿ ಪ್ರತಿಪಾದಿಸಿದನು. ಇತರ ಹಲವು ಪೊಟ್ಟಣಗಳೊಂದಿಗೆ ಇರುವ ಆ ಪೊಟ್ಟಣವನ್ನು ಗುರುತಿಸಲು ಕೇಳಲ್ಪಟ್ಟಾಗ, ಅವನು ಅಸ್ತವ್ಯಸ್ತನಾದನು. ನ್ಯಾಯಸ್ಥಾನದಲ್ಲಿದ್ದ ಪ್ರೇಕ್ಷಕರಲ್ಲಿಯ ಕೆಲವರು ನಗಾಡಿದರು; ಅವರನ್ನು ನ್ಯಾಯಾಧೀ

ಶನು, ನ್ಯಾಯಸ್ಥಾನದ ನಿಯಮಗಳಿಗೂ ಮರ್ಯಾದೆಗೂ ಗಮನಕೊಡು ವಂತೆ ಎಚ್ಚರಿಸಿ, ಸುಮ್ಮನಾಗಿರಿಸಿದನು.

ಕೊನೆಗೆ ನ್ಯಾಯಾಧೀಶನು ಮೊಕದ್ದಮೆಯ ವಿಷಯವನ್ನು ಮೊತ್ತ ವಾಗಿ ಹೇಳುತ್ತ, ಆಪಾದನೆ ಮಾಡಿದ ಪಕ್ಷವು ಸಾಕಷ್ಟು ರುಜುವಾತನ್ನು ಹಾಜರುಪಡಿಸಲಿಲ್ಲವೆಂದು ಹೇಳಿದನು ನ್ಯಾಯದರ್ಶಿಗಳು ಒಪ್ಪಿದರು, ಮತ್ತು "ತಪ್ಪಿತಸ್ಥನಲ್ಲ'' ಎಂಬ ನ್ಯಾಯದರ್ಶಿಗಳ ತೀರ್ಪು ಕೊಟ್ಟರು.

ನ್ಯಾಯಾಧೀಶನು ಆಪಾದಿತನನ್ನು ವಿಮೋಚನೆ ಮಾಡುತ್ತ ಟೀಕೆ ಮಾಡಿದನು: "ನಾನು ನ್ಯಾಯದರ್ಶಿಗಳ ತೀರ್ಮಾನವನ್ನು ಒಪ್ಪಿಕೊಳ್ಳು ತ್ತೇನೆ. ಒಬ್ಬ ಮನುಷ್ಯನ ವಿರುದ್ಧವಾಗಿ ನಿಸ್ಸಂದೇಹವಾದ ರುಜುವಾತು ಇದ್ದ ಹೊರತು ಅವನು ತಪ್ಪಿತಸ್ಥನೆಂದು ನಿರ್ಣಯಿಸಬಾರದು. ಬರೀ ಸಂದರ್ಭ ಸಾಕ್ಷ್ಯದ ಆಧಾರದ ಮೇಲೆ ಒಬ್ಬ ಮನುಷ್ಯನು ತಪ್ಪಿತಸ್ಥನೆಂದು ನಿರ್ಣಯಿಸಲಾರರು.''

o o o o

ವರ್ಷಗಳ ಅನಂತರ ಸ್ಥಳೀಯ ಪೋಲೀಸರಿಗೆ ತಿರುಚಿಯ ಪೋಲೀಸ ರಿಂದ ಒಂದು ವರದಿ ಬಂತು. ಒಂದು ಹಳೆಯ ಚೋರರ ತಂಡವು ಲಾಲ್ಗು ಡಿಯ ಸಮೀಪದಲ್ಲಿ ದಸ್ತಗಿರಿ ಮಾಡಲ್ಪಟ್ಟಿತ್ತು. ಅವರು ಹಲವು ಸ್ಥಳಗಳಲ್ಲಿ ಮಕ್ಕಳನ್ನು ಎತ್ತಿಕೊಂಡು ಹೋಗಿ ಅವರ ಆಭರಣಗಳನ್ನು ದರೋಡೆ ಮಾಡುವಂಥ ಹಲವು ತಕ್ಸೀರುಗಳನ್ನು ಮಾಡಿದ್ದರೆಂದು ಕಂಡುಬಂದಿದೆ, ಎಂದು ವರದಿಯಲ್ಲಿ ಹೇಳಲಾಗಿತ್ತು. ಆ ತಂಡದಲ್ಲಿದ್ದ ಒಬ್ಬಳು ಹೆಂಗಸು, ಮೂರು ವರ್ಷಗಳ ಹಿಂದೆ, ಒಂದು ಪೇಟೆಯಿಂದ ಒಬ್ಬ ಹುಡುಗನನ್ನು ಎತ್ತಿ ಕೊಂಡು ಹೋಗಿ ಆ ತಂಡಕ್ಕೆ ಒಪ್ಪಿಸಿದ್ದಳೆಂಬುದನ್ನು ಒಪ್ಪಿಕೊಂಡಿದ್ದಳೆಂದು ಆ ವರದಿಯಲ್ಲಿ ಮುಂದೆ ಹೇಳಲಾಗಿತ್ತು. ಹುಡುಗನು ಕೊಲೆ ಮಾಡಲ್ಪಟ್ಟನು ಮತ್ತು ಅವನ ಕಾಲ್ಗಡಗಗಳನ್ನು ಅವರು ತೆಗೆದ-ಕೊಂಡ ಮೇಲೆ ಅವನ ದೇಹವನ್ನು ಒಂದು ಕೆರೆಯಲ್ಲಿ ಬಿಸಾಡಿಬಿಟ್ಟಿದ್ದರೆಂದು ಸಹ ಆ ವರದಿಯಲ್ಲಿ ಹೇಳಲ್ಪಟ್ಟಿತ್ತು.

ಮಾಧವ ರಾಯನು ಇವನ್ನು ಕೇಳಿದಾಗ, ಹೇಳಿದನು: "ನೋಡು, ಸೀತಾ! ಕಣ್ಣನನು ನಿರಪರಾಧಿಯೆಂದು ನಾನು ನಿನಗೆ ಹೇಳಿರಲಿಲ್ಲವೇ?

ಈಗ, ಇದು ಅವನ್ನು ಸಿದ್ಧಪಡಿಸುತ್ತದೆ. ದುರದೃಷ್ಟಶಾಲಿಯಾದ ಕಣ್ಣನ್! ನವಿಸ್ಮಿಂದಾಗಿ ಅವನೆಷ್ಟು ದುಃಖವನ್ನು ಅನುಭವಿಸಿರಬೇಕು!''

ಸೀತಮ್ಮಳು ಇನ್ನೂ ಖಚಿತಗೊಳಿಸಲ್ಪಡಲಿಲ್ಲ. "ಹೌದು............ ಆದರೆ, ಅವನೇಕೆ ಆ ಮಗುವಿಗೆ ಬಾಳೆ ಹಣ್ಣನ್ನು ಕೊಟ್ಟನು? ನೀವು ಅದಕ್ಕೇನು ಹೇಳುವಿರಿ?" ಅವಳು ಕೇಳಿದಳು.

ಮಾಧವ ರಾಯನು ಉತ್ತರವಿತ್ತನು: "ಅವನು ಮನೆಗೆ ತೆಗೆದು ಕೊಂಡು ಹೋಗುತ್ತಿದ್ದ ಒಂದು ಗೊಂಚಲಿನಿಂದ ಒಂದು ಬಾಳೆ ಹಣ್ಣನ್ನು ಮಗುವಿಗೆ ಕೊಟ್ಟನು. ಅದರಲ್ಲಿ ತಪ್ಪೇನಿದ್ದಿತು? ಆ ಮೇಲೆ ಅವನು ಮನೆಗೆ ಹೋದನು. ಆ ಮಗುವು ಈ ದರೋಡೆಕೋರರ ಕ್ರೂರ ಮುಷ್ಟಿಯೊಳಗೆ ಸಿಕ್ಕಿಬಿತ್ತು; ಅವರು ಅವನನ್ನು ಎತ್ತಿಕೊಂಡು ಹೋಗಿ ಕೊಲೆ ಮಾಡಿದರು.''

"ಹಾಗಾದರೆ, ಕಣ್ಣನನ ಮನೆಯಲ್ಲಿ ಸಿಕ್ಕಿದ್ದ ಆ ಪಟಾಕಿ ಪೊಟ್ಟಣದ ವಿಷಯದಲ್ಲಿ ನೀವು ಹೇಗೆ ಸಮಾಧಾನ ಹೇಳುವಿರಿ?'' ಸೀತಮ್ಮಳು ಕೇಳಿದಳು.

"ಅದು, ಅದೇ ಪೊಟ್ಟಣವಾಗಿತ್ತೆಂದು ನಮಗೆ ಹೇಗೆ ತಿಳಿದಿದೆ? ರಾಮಚಂದ್ರನನ್ನು ನಾವು ಅರಿಯೆವೆ?'' ಮಾಧವ ರಾಯನು ಉತ್ತರವಿತ್ತನು.

ರಾಮಚಂದ್ರ ರಾಯನು ಅಲ್ಲೇ ಇದ್ದನು; ಮತ್ತು ಚರ್ಚೆಯಲ್ಲಿ ಪ್ರವೇಶಿಸಿದನು: "ನೋಡಿ, ನ್ಯಾಯಸ್ಥಾನದಲ್ಲಿ ನೀವು ಸಾಕ್ಷ್ಯ ಹೇಳುವಾಗ, ಏನು ಸಂದೇಹಾಸ್ಪದವಾದ ರೀತಿಯಲ್ಲಿ ವಾಜ್ಮೂಲ ಕೊಡಲಾರಿರಿ. ನೀವು ಹೇಳುವುದರ ಕುರಿತು ನೀವು ನಿರ್ದಿಷ್ಟರಾಗಿರಬೇಕು. ಒಂದು ಪೊಟ್ಟಣವು ಇನ್ನೊಂದರಂತೆಯೇ ಇರುವುದೆಂಬುದನ್ನು ನ್ಯಾಯಾಧೀಶನು ಕಾಣಬಲ್ಲನು; ಆದರೆ ಆ ವಿಷಯದಲ್ಲಿ ನಾನೇಕೆ ಅನಿಶ್ಚಯ ರೀತಿಯಿಂದಿರಬೇಕು?'' ರಾಮಚಂದ್ರ ರಾಯನು ಸಮರ್ಥಿಸಿದನು.

ವಕೀಲ ವೀರರಾಘವ ಅಯ್ಯಂಗಾರನು ಸಹ ಮಾಧವ ರಾಯನ ಮನೆಗೆ ಬಂದಿದ್ದನು. ಅವನು ಟೀಕೆ ಮಾಡಿದನು: "ಅದು ವಾದಾಂಶವಲ್ಲ, ರಾಮಚಂದ್ರ ರಾವ್. ಬದಲಿಗೆ ಇದರಲ್ಲಿ ಬೇರೆ ಏನೋ ಒಂದಿದೆ. ರಹಸ್ಯವು ಯಾರಿಗೂ ತಿಳಿದಿಲ್ಲ.''

"ಒಳ್ಳೇದು; ಏನದು ರಹಸ್ಯ? ದಯೆಮಾಡಿ ನಮಗೆ ಹೇಳಿರಿ." ರಾಮಚಂದ್ರ ರಾಯನು ಕೇಳಿಕೊಂಡನು.

"ನಿಜವನ್ನು ಹೇಳುವುದಾದರೆ," ವೀರರಾಘವ ಅಯ್ಯಂಗಾರನು ಹೇಳಿದನು, "ಕಣ್ಣನನ ಮನೆಯಲ್ಲಿ ಸಿಕ್ಕಿದ್ದ ಪಟಾಕಿ ಪೊಟ್ಟಣವು ಬಾಲು ವಿದ್ದೇ ಆಗಿತ್ತು. ಕಣ್ಣನನು ಒಂದು ಬಾಳೆ ಹಣ್ಣನ್ನು ಬಾಲುವಿಗೆ ಕೊಟ್ಟು ಅವನಿಂದ ಪಟಾಕಿ ಪೊಟ್ಟಣವನ್ನು ಉಪಾಯದಿಂದ ತೆಗೆದು ಕೊಂಡಿದ್ದ ನೆಂಬುದು ನಿಜವಿದೆ. ಅವನು ಬಂಧನ ಗೃಹದಲ್ಲಿದ್ದಾಗ ನಾನು ಅವನಿಗೆ ಈ ಕುರಿತು ಕೇಳಿದ್ದೆನು: 'ನೀನು ಇದನ್ನೇಕೆ ಮಾಡಿದೆ? ಒಂದು ಪಟಾಕಿ ಪೊಟ್ಟಣದ ಸಲುವಾಗಿ ಒಂದು ಮಗುವಿನ ಕೊಲೆ ಮಾಡುವುದೇಕೆ?' ಆಗ ಅವನು ನನಗೆ ಹೇಳಿದ ಕಥೆಯು ಹೀಗಿದೆ: 'ನಾನು ಆ ಮಗುವನ್ನು ಕೊಲ್ಲಲಿಲ್ಲ. ನನ್ನ ಮಗುವಿಗೆ ಒಂದು ಪಟಾಕಿ ಪೊಟ್ಟಣವು ಬೇಕಾಗಿತ್ತು. ನನ್ನೊಡನೆ ಹಣವಿರಲಿಲ್ಲ. ಆದುದರಿಂದ ನಾನು ಬಾಲುವಿನಿಂದ ಪಟಾಕಿ ಪೊಟ್ಟಣವನ್ನು ತೆಗೆದುಕೊಂಡೆನು; ಆ ಮಗುವಿಗೆ ಬಾಳೆಹಣ್ಣು ಕೊಟ್ಟೆನು; ಮತ್ತು ಅವನನ್ನು ಮನೆಗೆ ಕಳುಹಿಸಿದೆನು. ನಾನು ಮೇಲ ನತ್ತನದಲ್ಲಿ ಇರುವ ನನ್ನ ಮನೆಗೆ ಹೋದೆನು.' ನಾನು ಈ ಕಥೆಯನ್ನು ಆಗ ನಂಬಿರಲಿಲ್ಲ. ಅವನು ಸುಳ್ಳು ಹೇಳುತ್ತಿದ್ದನು, ಮತ್ತು ಈ ಕೊಲೆಗೆ ಅವನೇ ಹೊಣೆಗಾರನಾಗಿದ್ದನು ಎಂದು ಸಹ ನಾನು ಯೋಚಿಸಿದ್ದೆ. 'ನೀನು ನ್ಯಾಯಸ್ಥಾನದಲ್ಲಿ ಇದನ್ನು ಹೇಳಿದರೆ ನಿನ್ನ ವಿರುದ್ಧವಾದ ಮೊಕದ್ದಮೆಯು ಬಲಗೊಳ್ಳುವುದು; ಇದನ್ನು ನ್ಯಾಯಸ್ಥಾನದಲ್ಲಿ ಹೇಳಬೇಡ; ನೀನು ಪೋಲೀಸರೊಡನೆ ಹೇಳಿದ್ದ ಕಥೆಯನ್ನೇ ಸಮರ್ಥಿಸು; ಮತ್ತು ಪಟಾಕಿ ಪೊಟ್ಟಣದ ವಿಷಯದಲ್ಲಿ ನಿನಗೆ ಏನೂ ತಿಳಿದಿಲ್ಲವೆಂದು ಹೇಳು;' ಎಂದು ನಾನು ಅವನಿಗೆ ತಿಳುವಳಿಕೆ ಕೊಟ್ಟಿದ್ದೆನು."

ವೀರರಾಘವ ಅಯ್ಯಂಗಾರನು ಮಾತು ಮುಗಿಸಿದಾಗ ಸೀತಮ್ಮಾಳು ಕೂಗಿ ಹೇಳಿದಳು: "ಹೋ, ದೇವರೆ! ವಕೀಲರು ಈ ರೀತಿ ಅಪ್ರಾಮಾಣಿಕರಾಗಿರುವರೆ? ಸತ್ಯ ಸ್ಥಿತಿಯನ್ನು ಮುಚ್ಚಿಡುವುದು ನಿಮ್ಮ ಉದ್ಯೋಗವೆ?"

"ಈ ವಿಷಯಗಳಲ್ಲಿ ನಿನಗೇನು ತಿಳಿದಿದೆ? ಅಪರಾಧಿಗಳು ಅವರ ವಕೀಲರೊಡನೆ ಆಂತರಂಗದಲ್ಲಿ ಎಷ್ಟೋ ವಿಷಯಗಳನ್ನು ಹೇಳಬಹುದು. ಅವರು ಅವುಗಳನ್ನೆಲ್ಲ ನ್ಯಾಯಸ್ಥಾನದಲ್ಲಿ ಬಹಿರಂಗ ಮಾಡಿದರೆ, ಕಕ್ಷಿಗಾರ

ಮತ್ತು ವಕೀಲರೊಳಗೆ ಏನೂ ಉಳಿಯಲಾರದು." ಇದು ರಾಮಚಂದ್ರ ರಾಯನ ಅಹಂಭಾವದ ಊಹೆಯಾಗಿತ್ತು.

"ಅದು ಸರಿ, ಮಿತ್ರ ವೀರರಾಘವ ಅಯ್ಯಂಗಾರ್! ಕಣ್ಣನನು ಪಟಾಕಿ ಪೊಟ್ಟಣದ ವಿಷಯದಲ್ಲಿ ಸತ್ಯವನ್ನು ಹೇಳಿದ್ದನಾದರೆ, ಬಹುಶಃ ಅವನು ಗಲ್ಲಿಗೇರಿಸಲ್ಪಡುತ್ತಿದ್ದನು! ಒಬ್ಬ ನಿರಪರಾಧಿ ಮನುಷ್ಯನು ಅವನ ಜೀವವನ್ನು ಕಳೆದುಕೊಳ್ಳುತ್ತಿದ್ದನು!" ಮಾಧವರಾಯನು ಮೆಚ್ಚಿಕೆಯಿಂದ ಹೇಳಿದನು.

"ಇಲ್ಲಿ ನೋಡಿರಿ! ನೀವೆಲ್ಲರೂ ನನ್ನ ವಿಷಯದಲ್ಲಿ ಪರಿಹಾಸಮಾಡಿದಿರಿ! ಈಗ ಆ ಪಟಾಕಿ ಪೊಟ್ಟಣವನ್ನು ನಾನು ಗುರುತಿಸಿದ್ದುದು ಸರಿಯಾಗಿತ್ತೆಂದು ಸಿದ್ಧವಾಗಲಿಲ್ಲವೆ?" ರಾಮಚಂದ್ರರಾಯನು ಕೇಳಿದನು.

o o o o o

"ಒಬ್ಬ ಐಶ್ವರ್ಯವಂತನ ಮನೆಯಲ್ಲಿ ಸೇವೆಮಾಡುವುದು ಯಾವಾಗಲೂ ಅಪಾಯಸಂಭವವುಳ್ಳದ್ದಾಗಿರುವುದು" ಎಂದು ಕುಂಜಮ್ಮಳು ಹೇಳಿದಳು.

"ಅಪಾಯಸಂಭವವೆಲ್ಲಿದೆ?" ಸೀತಮ್ಮಳು ಕೇಳಿದಳು.

"ಇಂದಿನ ದಿನಗಳಲ್ಲಿ ಮಕ್ಕಳನ್ನು ಆಭರಣಗಳಿಂದ ಸಿಂಗರಿಸಿ, ರಸ್ತೆಗಳಲ್ಲೆಲ್ಲ ಅಲೆದಾಡಲು ಬಿಡಬಾರದು!" ಹೆಣ್ಣಾಳು ಹೇಳಿದಳು; ಮತ್ತು ಆ ವಾತ್ಸಲ್ಯದ ಪ್ರಾಣಿಯು ಸೀತಮ್ಮಳ ಮಗುವನ್ನೆತ್ತಿ ಮುದ್ದಾಡಿದಳು.

"ಅಮ್ಮಾ, ನಾನು ಮನೆಗೆ ಹೋಗುವೆನು. ಮನೆಯಲ್ಲಿ ಪ್ರತಿಯೊಂದರ ವಿಷಯದಲ್ಲಿ ಒಳ್ಳೇ ಜಾಗರೂಕತೆಯಿಂದ ಇರಿ" ಎಂದು ಹೇಳಿ ಕುಂಜಮ್ಮಳು ಹೊರಟುಹೋದಳು.

o o o o o

ಕುಂಜಮ್ಮಳು ಒಂದು ಗಾಢ ಸತ್ಯವನ್ನೇ ಹೇಳಿದ್ದಳು. ಬಡವರು ಐಶ್ವರ್ಯವಂತರ ಮನೆಯಲ್ಲಿ ಸೇವೆಮಾಡುವುದು ನಿಶ್ಚಯವಾಗಿಯೂ ಅಪಾಯಸಂಭವವಾಗಿರುವುದು. ಅವರು ಯಾವಾಗಲೂ ಅಲ್ಪ ವಿಷಯಗಳ ಕುರಿತಾಗಿಯೂ ಅಪನಂಬಿಕೆಗೆ ಒಳಗಾಗುವರು! ಆದರೆ ಅವರು ಯಾರೊಬ್ಬರದೂ ಸೇವೆಮಾಡದಿದ್ದರೆ, ಅವರಿಗೆ ಜೀವನೋಪಾಯದ ದಾರಿಯಿಲ್ಲ. ದೇವರೇ ಅವರನ್ನು ರಕ್ಷಿಸಬೇಕು!

"ಒಂದಾಣೆ ಮಾಲೆ"ಯ ಲೇಖಕರ ಬಳಗ.

"ಒಂದಾಣೆ ಮಾಲೆ"ಯಲ್ಲಿ, ನಾಡಿನ ಪ್ರಸಿದ್ಧ ಲೇಖಕರು ಬರೆಯುತ್ತಿರುವರು. ಎಲ್ಲ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. ವಾರಕ್ಕೊಂದು ಪುಸ್ತಕ; ಪ್ರತಿ ಶನಿವಾರ ಪ್ರಕಟಣೆ; ಪ್ರತಿಯೊಂದಕ್ಕೆ ಒಂದಾಣೆ.

"ಒಂದಾಣೆ ಮಾಲೆ"ಯ ಲೇಖಕರಲ್ಲಿ ಕೆಲವು ಹೆಸರುಗಳನ್ನು
ಇಲ್ಲಿ ಕೊಟ್ಟಿರುವೆವು:

ಶ್ರೀ|ಗಳಾದ ರಾಷ್ಟ್ರಕವಿ ಗೋವಿಂದ ಪೈಯವರು, ಕೆ. ಎಸ್. ಶರ್ಮ- ವಿದ್ವಾನ್, ಕೆ. ಎಸ್. ಪದ್ಮನಾಭ ಆಚಾರ್ಯ--ವಿದ್ವಾನ್, ಎಮ್. ಸುಬ್ಬಾಯನ್-ವಿದ್ವಾನ್, ಬಿ. ಶಂಕರ ಭಟ್-ವಿದ್ವಾನ್, ಬಿ. ಎಮ್. ಶರ್ಮ- ವಿದ್ವಾನ್, ಬಳ್ಕೂರು ಸುಬ್ರಾಯ ಅಡಿಗ-ವಿದ್ವಾನ್, ಅಮ್ಮೆಂಬಳ ಅನಂತಯ್ಯ ನಾವಡ-ವಿದ್ವಾನ್, ಡಿ. ಪುಟ್ಟಸ್ವಾಮಿ-ಎಡ್ವೊಕೇಟ್, ಕೋ. ಶ. ಕಾರಂತ-ಎಡ್ವೊಕೇಟ್, ಪಿ. ಎಸ್. ವೆಂಕಟಕೃಷ್ಣರಾವ್, ಎಂ.ಎ.,ಬಿ.ಟಿ., ಟಿ. ಚಂದ್ರರಾಜ ಸೆಟ್ಟಿ, "ನವಗಿರಿನಂದ", ಪಿ. ವೆಂಕಟರಮಣ ಭಟ್, ಬಿ. ದಾಮೋದರ ಬಾಳಿಗ, ಬಿ. ಎ., ಅ. ಗೌ. ಕಿನ್ನಿಗೋಳಿ-ವಿದ್ವಾನ್, ಸಂ. ಜ. ರಾವ್, ಕೆ. ಸುಭಾಷಚಂದ್ರ ಶೆಣೈ, ಜಿ. ಆರ್. ಪಾಂಡೇಶ್ವರ್ (ಸಂಪಾದಕ: 'ಜಯ ಕರ್ನಾಟಕ'), ಎಲ್. ಎಸ್. ನಾಯಕ್, ಡಾ| ವಿ. ಆರ್. ಭಟ್, ಡಾ| ಎಸ್. ಪಿ. ಭಟ್, ವೈದ್ಯಗುರು ಎಂ. ಆರ್. ಭಟ್. ಕುಡ್ಪಿ ವಾಸುದೇವ ಶೆಣೈ, ಮೊದಲಾದವರು.

ದಿ| ಎಮ್. ಎಸ್. ಕಾಮತರ ಪ್ರಹಸನಗಳು 'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾಗಿವೆ. ಇನ್ನೂ ಕೆಲವು ಪ್ರಕಟವಾಗಲಿವೆ.

'ಒಂದಾಣೆ ಮಾಲೆ'ಯ ಯಾವ ಪ್ರಕಟಣೆಯೂ 16+4 ಪುಟಗಳಿಗಿಂತ ಕಡಿಮೆಯಾಗುವುದಿಲ್ಲ. ಕೆಲವು ಪ್ರಕಟಣೆಗಳಲ್ಲಿ 28, 32 ಅಥವಾ 36 ಪುಟಗಳಿರುವುವು.

ಎಲ್ಲ ನ್ಯೂಸ್ ಏಜಂಟರಲ್ಲೂ ಪುಸ್ತಕ ವ್ಯಾಪಾರಿಗಳಲ್ಲೂ ದೊರೆವುದು.
ಅಥವಾ
ಒಂದಾಣೆ ಮಾಲೆ,
ಪ್ರಭಾತ ಆಫೀಸು, ರಥಬೀದಿ, ಮಂಗಳೂರು-೧.

Edited, Printed and Published by K. V. Shenoy
at The Prabhat Printers, Ltd., Mangalore-1.